ಈ ಕಾರ್ಖಾನೆಯು ಹಣದ ಮುಗ್ಗಟ್ಟು ಎದುರಿಸುತ್ತಿದೆ. ೧೦೦೦ ರೂ. ಅಡ್ವಾನ್ಸ್ ಕೊಡಿಸಲು ಸಂದಾನದ ಮಂಡಲಕ ಪ್ರಯತ್ನಿಸಲಾಗುವುದು.

ಕಾರ್ಖಾನೆ ಕೆಲಸ ಆರಂಭಿಸಲು ನಮ್ಮ ಮುಖ್ಯ ಮಂತ್ರಿಗಳು ೨೮-೧೧-೧೯೬೬ರಂದು ಕೇಂದ್ರ ಕೈಗಾರಿಕಾ ಮಂತ್ರಿಗಳಿಗೆ ಪತ್ರ ಬರೆದು ಈ ಬಗ್ಗೆ ಸಹಾಯಕ ಕ್ರಮ ತೆಗೆದುಕೊಳ್ಳಲು ಕೋರಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ತಿಳಿಸಿಲ್ಲ.

ಪ್ರಧಾನಮಂತ್ರಿಯವರು ದುರ್ಗಾಪುರ ಕಾರ್ಖಾನೆ ಮತ್ತಿತರ ಕಾರ್ಖಾನೆ ಬಗ್ಗೆ ನಡೆಸುತ್ತಿರುವ ಕ್ರಮದ ಬಗ್ಗೆ ನಮಗೆ ಯಾವುದೇ ನಿಖರವಾದ ಮಾಹಿತಿ ಬಂದಿಲ್ಲ. ಅಗತ್ಯ ಕಂಡು ಬಂದರೆ ಪ್ರಧಾನ ಮಂತ್ರಿಯವರಿಗೆ ಈ ಬಗ್ಗೆ ಪತ್ರ ಬರೆಯಲಾಗುವುದು.

ಬೆಳಗಾಂ ಹಾಗೂ ಸವದತ್ತಿ ಪಟ್ಟಣಗಳ ನೀರು ಸರಬರಾಜು ಬೋರ್ಡಿನ ನೌಕರ ವರ್ಗದವರಿಗೆ ಸೌಲಭ್ಯಗಳನ್ನು ಒದಗಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಮತ್ತು ಸವದತ್ತಿ ನಗರದ ನೀರು ಸರಬರಾಜು ಸಿಬ್ಬಂದಿ ವರ್ಗಕ್ಕೆ ಸರಿಯಾಗಿ ಸರಕಾರದಿಂದ ಒದಗಬೇಕಾಗಿರುವ ಸೌಲಭ್ಯಗಳು ದೊರೆಯುತ್ತಿಲ್ಲ. ಈ ಕಾರಣದಿಂದಾಗಿ ನೀರು ಸರಬರಾಜು ಸಿಬ್ಬಂದಿ ವರ್ಗದಿಂದ ದಿನಾಂಕ ೫-೩-೧೯೬೭ ರಿಂದ ಸರದಿ ಅನ್ನ ಸತ್ಯಾಗ್ರಹ ಹಾಗೂ ತದನಂತರ ದಿನಾಂಕ ೧೦-೩-೧೯೬೭ ರಿಂದ ಅನಿರ್ದಿಷ್ಟ ಅವಧಿಯವರೆಗೆ ಅನ್ನ ಸತ್ಯಾಗ್ರಹ ಹಾಗೂ ನೀರಂ ಬಂದ್ ಕಾರ್ಯಕ್ರಮವನ್ನು ಹಮ್ಮಿ ಕೊಂಡಿರುತ್ತಾರೆ. ಆದಕಾರಣ ಸಾರ್ವಜನಿಕರಿಗೆ ಆಗಬಹುದಾದ ತೊಂದರೆಯನ್ನು ತಪ್ಪಿಸಿ ಸಿಬ್ಬಂದಿ ವರ್ಗಕ್ಕೆ ಒದಗಿಸಬೇಕಾಗಿರುವ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸುತ್ತೇನೆ. ಈ ವಿಷಯದಲ್ಲಿ ಸದನದಲ್ಲಿ ಹೇಳಿಕೆ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ,—ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಮಂಗಳೂರಿನ ಆರೋಗ್ಯ ಇಲಾಖೆಯಲ್ಲಿರುವ ವಾಹನಗಳ ದುರಸ್ತಿಯ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಆರೋಗ್ಯ ಇಲಾಖಾ ಆಫೀಸು ವಹಾರದಲ್ಲಿ ಸುಮಾರ್ಗಟ್ಟಲೆ ಜೀಪುಗಳು ಇನ್ನಿತರ ವಾಹನಗಳು ಹಾಳಾಗಿ ಅನೇಕ ಕಾಲದಿಂದ ಬಿದ್ದಿರುವುದನ್ನು ನೋಡುವಾಗ ಖೇದವಾಗುತ್ತದೆ. ಹಾಳಾದ, ದುರಸ್ತಿ ಮಾಡಬೇಕಾದ ವಾಹನಗಳ ರಾಶಿಯೇ ಬೇಸರ ಹುಟ್ಟಿಸುತ್ತದೆ. ಇದು ಸರ್ಕಾರಕ್ಕೆ ನಷ್ಟ ಪಲ್ಲವೇ ? ಈ ಬಗ್ಗೆ ಯಾವುದೇ ಜಾಗೃತೆ ವಹಿಸಿ ಆ ವಾಹನಗಳನ್ನು ದುರಸ್ತಿಪಡಿಸದೆ ಇರಲು ಕಾರಣಗಳೇನು ? ಆದಕಾರಣ ಎಷ್ಟು ವಾಹನಗಳು ಈ ರೀತಿ ಹಾಳಾಗಿ ಬಿದ್ದಿವೆ ? ಇದು ಆರೋಗ್ಯ ಇಲಾಖೆಯದ್ದು ಅಲ್ಲವೆ ? ಇದರ ಮುಂದಿನ ಕ್ರಮಗಳೇನು ? ಈ ಕುರಿತು ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಂ ಆರೋಗ್ಯ ಮತ್ತಿತ್ತ ಕುಟುಂಬ ಕಲ್ಯಾಣ ಅಧಿಕಾರಿಗಳ ಉಪಯೋಗಕ್ಕಾಗಿ ೬೫ ವಿವಿಧ ತರಹದ ಮೋಟಾರ್ ವಾಹನಗಳನ್ನು ಕೊಡಲಾಗಿತ್ತು. ಅವುಗಳ ಪೈಕಿ ೧೨ ವಾಹನಗಳು ಕೆಟ್ಟು ಹೋಗಿದ್ದು, ಅವುಗಳ ದುರಸ್ತಿ ವೆಚ್ಚವು ಬಹಳ ಜಾಸ್ತಿ ಆಗುವುದರಿಂದಲೂ ಒಂದು ವೇಳೆ ದುರಸ್ತಿ ಮಾಡಿ ಉಪಯೋಗಿಸಿದರೂ